ಕನ್ನಡಪ್ರಭ




# ಅಂಡರ್‌ರೈಟರ್ಸ್ ಲ್ಯಾಬ್ ಜತೆ ಜೈನ್ ಸಮೂಹ ಒಪ್ಪಂದ

**ಬೆಂಗಳೂರು:** ಜೈನ ಸಮೂಹ ಶಿಕ್ಷಣ ಸಂಸ್ಥೆಯು ಅಗ್ನಿ ಉತ್ಪನ್ನ ಸುರಕ್ಷಾ ಪರೀಕ್ಷೆ ಹಾಗೂ ಪ್ರಮಾಣೀಕರಣಕ್ಕೆ ಅಂಡರ್‌ರೈಟರ್ಸ್ ಲ್ಯಾಬೊರೇಟರೀಸ್(ಯುಎಲ್) ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಒಪ್ಪಂದದ ಫಲವಾಗಿ ಯುಎಲ್ - ಜೈನ್ ಫೈರ್ ಲ್ಯಾಬೊರೇಟರಿ ಎಂಬ ಹೆಸರಿನಲ್ಲಿ ಜೈನ್ ಗ್ಲೋಬಲ್ ಕ್ಯಾಂಪಸ್ ನಲ್ಲಿ ವಿಭಾಗ ಆರಂಭವಾಗಿದೆ. ಯುಎಲ್ ಸಂಸ್ಥೆಯು ಭಾರತಕ್ಕೆ ಅಗ್ನಿ ಪರೀಕ್ಷಾ ಸೇವೆಗಳನ್ನು ಒದಗಿಸುವುದರೊಂದಿಗೆ, ಅಗ್ನಿ ಸುರಕ್ಷಾ ಶಿಕ್ಷಣ ಯೋಜನೆ ಹಾಗೂ ಸಂಶೋಧನೆ, ಅಭಿವೃದ್ಧಿ ಚಟುವಟಿಕೆ ನಡೆಸಲು ನೆರವು ನೀಡುತ್ತಿದೆ.

ಜೈನ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಚೆನ್‌ರಾಜ್ ರಾಯ್‌ಚಂದ್ ಮಾತನಾಡಿ, ಮಾರ್ಚ್ 2015ರಲ್ಲಿ ಒಂದು ಒಳಾಂಗಣಫೈರ್‌ಸಸ್ಟೆನ್ಸನ್‌ಲ್ಯಾಬೊರೇಟರಿಯನ್ನುಪ್ರಾರಂಭಿಸಲು ಯೋಜನೆಯನ್ನು ನಡೆಸುತ್ತಿದ್ದೇವೆ. ಯುಎಲ್‌ನ ಜ್ಞಾನ ಹಾಗೂ ಪರಿಣತಿಯ ಸಹಾಯದಿಂದ ಜೆಜಿಐ ಗ್ರೂಪ್ ಫೈರ್ ಸೇಫ್ಟಿ ಇಂಜಿನಿಯರಿಂಗ್‌ನಲ್ಲಿ ಈಗಾಗಲೇ ಸ್ನಾತಕೋತ್ತರ ಪದವಿಯನ್ನು ಭಾರತದಲ್ಲಿ ಪ್ರಸ್ತುತ ಪಡಿಸುತ್ತಿದೆ ಎಂದು ಹೇಳಿದರು.